# <u>ಕರ್ನಾಟಕ ವಿಧಾನ ಪರಿಷತ್ತು</u>

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **744** |
| 2 | ಸದಸ್ಯರ ಹೆಸರು | : | **ಅಡಗೂರ್ ಹೆಚ್. ವಿಶ್ವನಾಥ್ (ನಾಮ ನಿರ್ದೇಶನ ಹೊಂದಿದವರು)** |
| 3 | ಉತ್ತರಿಸಬೇಕಾದ ದಿನಾಂಕ | : | **13.03.2025** |
| 4 | ಉತ್ತರಿಸುವ ಸಚಿವರು | : | **ಗೃಹ ಸಚಿವರು** |

<table>
<tr><th>ಪ್ರ ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr>
<td>(ಅ)</td>
<td>ದಿನಾಂಕ: 01.01.2015 ರಿಂದ 31.03.2025 ರವರೆಗೆ ಪೊಲೀಸ್ ಇಲಾಖೆಯ ವಿವಿಧ ಘಟಕಗಳಲ್ಲಿ ಕೋಟ್ಯಾಂತರ ರೂ.ಗಳು ಅಧಿಕಾರಿಗಳ ಮತ್ತು ಆಡಳಿತ ಸಿಬ್ಬಂದಿಯವರ ಅಧಿಕಾರ ದುರುಪಯೋಗ, ನಿಯಮಾವಳಿಗಳ ಉಲ್ಲಂಘನೆ ಮತ್ತು ನಿರ್ಲಕ್ಷತೆಯಿಂದ ಸರ್ಕಾರದ ಬೊಕ್ಕಸಕ್ಕೆ ಉಂಟಾದ ಆರ್ಥಿಕ ನಷ್ಟದ ಬಗ್ಗೆ, ಇಲಾಖೆ ಮತ್ತು ಮಹಾ ಲೆಕ್ಕಪರಿಶೋಧಕರ ಲೆಕ್ಕ ಪರಿಶೋಧನೆಯಿಂದ ಎಷ್ಟು ಕೋಟಿ ದುರುಪಯೋಗವಾಗಿರುವುದು ಬೆಳಕಿಗೆ ಬಂದಿದೆ;</td>
<td>ದಿನಾಂಕ: 01.01.2015 ರಿಂದ 31.03.2025 ರ ಅವಧಿಯಲ್ಲಿ ಮಹಾಲೇಖಪಾಲರ ಲೆಕ್ಕ ಪರಿಶೋಧನೆ ಮತ್ತು ಆಂತರಿಕ ಲೆಕ್ಕ ಪರಿಶೋಧನೆಯನ್ನು ಸರ್ಕಾರದ ಹಣ ದುರುಪಯೋಗವಾಗಿರುವ ಉಂಟಾದ ಆರ್ಥಿಕ ನಷ್ಟದ ವಿವರ ಈ ಕೆಳಗಿನಂತಿದೆ.
<br><u>ಮಹಾಲೇಖಪಾಲರ ಲೆಕ್ಕ ಪರಿಶೋಧನೆ</u>
<table>
<tr><th>ಕ್ರಮ ಸಂ.</th><th>ಘಟಕ</th><th>ಅವಧಿ</th><th>ಉಂಟಾದ ನಷ್ಟ (ರೂ.ಗಳಲ್ಲಿ)</th></tr>
<tr><td rowspan="2">1</td><td rowspan="2">ಎಸ್.ಪಿ., ತುಮಕೂರು ಜಿಲ್ಲೆ</td><td>2018-20</td><td>4,68,412/-</td></tr>
<tr><td>2018-20</td><td>20,51,000/-</td></tr>
<tr><td>2</td><td>ಡಿ.ಸಿ.ಪಿ., ಸಿ.ಎ.ಆರ್ (ಕೇಂದ್ರ), ಬೆಂಗಳೂರು</td><td>2016-20</td><td>66,000/-</td></tr>
<tr><td>3</td><td>ಡಿ.ಸಿ.ಪಿ., ಸಿ.ಎ.ಆರ್ (ಕೇಂದ್ರ), ಬೆಂಗಳೂರು</td><td>2020-23</td><td>59,80,000/-</td></tr>
<tr><td colspan="3">ಒಟ್ಟು</td><td>85,65,412/-</td></tr>
</table>
<u>ಆಂತರಿಕ ಲೆಕ್ಕ ಪರಿಶೋಧನೆ</u>
<table>
<tr><th>ಕ್ರಮ ಸಂ.</th><th>ಘಟಕ</th><th>ಅವಧಿ</th><th>ಉಂಟಾದ ನಷ್ಟ (ರೂ.ಗಳಲ್ಲಿ)</th></tr>
<tr><td>1</td><td>ಎಸ್.ಪಿ., ತುಮಕೂರು ಜಿಲ್ಲೆ</td><td>2019-20</td><td>30,60,722/-</td></tr>
<tr><td>2</td><td>ಎಸ್.ಪಿ., ಕೊಡಗು ಜಿಲ್ಲೆ</td><td>2020-23</td><td>23,650/-</td></tr>
<tr><td>3</td><td>ಕಮಾಂಡೆಂಟ್, 11ನೇ ಕೆ.ಎಸ್.ಆರ್.ಪಿ., ಹಾಸನ</td><td>01/2015 ರಿಂದ 11/2016</td><td>4,06,39,946/-</td></tr>
<tr><td>4</td><td>ಕಮಾಂಡೆಂಟ್, 1ನೇ ಕೆ.ಎಸ್.ಆರ್.ಪಿ., ಬೆಂಗಳೂರು</td><td>01/2010 ರಿಂದ 20.08.2015</td><td>18,98,815/-</td></tr>
<tr><td colspan="3">ಒಟ್ಟು</td><td>4,56,23,133/-</td></tr>
</table>
</td>
</tr>
</table>

| | | |
|---|---|---|
| (ಆ) | ಇತ್ತೀಚೆಗೆ ಎಸ್.ಪಿ. ಮಡಿಕೇರಿ, ಎಸ್.ಪಿ. ತುಮಕೂರು, ಕಮಾಂಡೆಂಟ್, 11ನೇ ಪಡೆ ಕೆ.ಎಸ್.ಆರ್.ಪಿ., ಹಾಸನ ಹಾಗೂ ಇತರ ಘಟಕಗಳಲ್ಲಿ ಕೋಟಿ ಗಟ್ಟಲೆ ಹಣ ದುರುಪಯೋಗವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಘಟಕಾಧಿಕಾರಿಗಳು ಮತ್ತು ಸಹಾಯಕ ಆಡಳಿತ ಅಧಿಕಾರಿಗಳು ಸೇರಿದಂತೆ ಸಿಬ್ಬಂದಿಗಳ ವಿರುದ್ಧ ಅಪರಾಧ ಮೊಕ್ಕದ್ದಮೆಯನ್ನು ಹೂಡದಿರಲು ಕಾರಣವೇನು? | **1. <u>ಪೊಲೀಸ್ ಅಧೀಕ್ಷಕರು, ಕೊಡಗು ಜಿಲ್ಲೆ</u>**<br>ಜಿಲ್ಲಾ ಪೊಲೀಸ್ ಕಛೇರಿ, ಕೊಡಗು ಜಿಲ್ಲೆಯಲ್ಲಿ ರೂ. 23,650/- ಗಳ ಮೊತ್ತವು ದುರುಪಯೋಗವಾಗಿರುವ ವಿಷಯಕ್ಕೆ ಸಂಬಂಧಿಸಿದಂತೆ ಮಡಿಕೇರಿ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ಸಂಖ್ಯೆ: 44/2021 ಕಲಂ: 409, 417, 420 ಐಪಿಸಿ ರೀತ್ಯ ಪ್ರಕರಣವು ದಾಖಲಾಗಿರುತ್ತದೆ. ಸದರಿ ಪ್ರಕರಣದ ದೋಷಾರೋಪಣಾ ಪಟ್ಟಿಯನ್ನು ಮಾನ್ಯ Addl.Civil Judge (Sr.Dn) & CJM Court Madikeri, Kodagu Dist, ಗೆ ಸಲ್ಲಿಸಲಾಗಿರುತ್ತದೆ ಮತ್ತು ಹಾಲಿ ವಿಚಾರಣೆಯಲ್ಲಿರುತ್ತದೆ.<br><br>**2. <u>ಪೊಲೀಸ್ ಅಧೀಕ್ಷಕರು, ತುಮಕೂರು ಜಿಲ್ಲೆ</u>**<br>ಅ) ರೂ. 20,51,000/- ಗಳ ಮೊತ್ತವನ್ನು ಮಹಾಲೇಖಪಾಲರು ಹಾಗೂ ರೂ. 30,60,722/-ಗಳ ಮೊತ್ತವನ್ನು ಆಂತರಿಕ ಲೆಕ್ಕ ಪರಿಶೋಧನೆಯಲ್ಲಿ ದುರಪಯೋಗವೆಂದು ಗುರುತಿಸಲಾಗಿದೆ. ಇದಕ್ಕೆ ಸಂಬಂಧಿಸಿದಂತೆ ಹೊಸಬಡಾವಣೆ ಪೊಲೀಸ್ ಠಾಣಾ ಮೊ.ನಂ: 62/2020, ಕಲಂ: 408, 409, 420, 465, 470 ಐಪಿಸಿ ರೀತ್ಯಾ ಕ್ರಿಮಿನಲ್ ಮೊಕದ್ದಮೆ ದಾಖಲಾಗಿ ದಿನಾಂಕ:11.05.2021 ರಂದು ಮಾನ್ಯ ಘನ ನ್ಯಾಯಾಲಯಕ್ಕೆ ದೋಷಾರೋಪಣಾ ಪತ್ರ ಸಲ್ಲಿಸಲಾಗಿದೆ. ಸಿ.ಸಿ ನಂ: 9662/2021 ರ ಪ್ರಕರಣವು ಘನ ನ್ಯಾಯಲಯದಲ್ಲಿ ವಿಚಾರಣಾ ಹಂತದಲ್ಲಿರುತ್ತದೆ.<br><br>ಆ) ರೂ. 4,68,412/- ಗಳ ದುರುಪಯೋಗಕ್ಕೆ ಸಂಬಂಧಿಸಿದಂತೆ ಆರೋಪಿತರ ವಿರುದ್ಧ ಹೊಸಬಡಾವಣೆ ಪೊಲೀಸ್ ಠಾಣೆ ಮೊ. ಸಂ. 24/2021, ಕಲಂ 408, 409, 420, 465, 470 ಐಪಿಸಿ ರೀತ್ಯಾ ಕ್ರಿಮಿನಲ್ ಮೊಕದ್ದಮೆ ದಾಖಲಾಗಿರುತ್ತದೆ.<br><br>**3. <u>ಕಮಾಂಡೆಂಟ್, 11ನೇ ಪಡೆ ಕೆ.ಎಸ್.ಆರ್.ಪಿ., ಹಾಸನ</u>**<br>ಘಟಕದಲ್ಲಿ ಮಾಹೆ:01/2015 ರಿಂದ 11/2016 ರವರೆಗಿನ ಅವಧಿಯಲ್ಲಿ ವೇತನ ಮತ್ತು ಭತ್ಯೆಗಳಿಗೆ ಸಂಬಂಧಪಟ್ಟಂತೆ ಪ್ರಧಾನ ಕಛೇರಿಯಿಂದ ವಿಶೇಷ ಆಂತರಿಕ ಲೆಕ್ಕ ಪರಿಶೋಧನೆಯನ್ನು ಕೈಗೊಳ್ಳಲಾಗಿದ್ದು, ಸದರಿ ವರದಿಯಲ್ಲಿ ಸುಮಾರು ರೂ:4,06,39,946/-ಗಳಷ್ಟು ಹಣ ದುರುಪಯೋಗವಾಗಿರುವ ಹಿನ್ನಲೆಯಲ್ಲಿ ಸಂಬಂಧಪಟ್ಟ ಅಧಿಕಾರಿ / ಸಿಬ್ಬಂದಿಗಳ ಮೇಲೆ ಶಾಂತಿಗ್ರಾಮ ಪೊಲೀಸ್ ಠಾಣೆ ಮೊಕದ್ದಮೆ ಸಂಖ್ಯೆ:75/2020 ಎಫ್ .ಐ.ಆರ್ ದಾಖಲಾಗಿರುತ್ತದೆ. ತದನಂತರ ಸದರಿ ಪ್ರಕರಣದ ತನಿಖೆಯನ್ನು ಸಿ.ಐ.ಡಿ ಬೆಂಗಳೂರು ರವರು ಪೂರ್ಣಾಗೊಳಿಸಿ ದೋಷಾರೋಪಣಾ ಅಂತಿಮ ಪಟ್ಟಿಯನ್ನು ಸಲ್ಲಿಸಿರುತ್ತಾರೆ. |

| | | |
|---|---|---|
| | | **ಇತರೆ ಘಟಕಗಳು**<br><br>**1. ಉಪ ಪೊಲೀಸ್ ಆಯುಕ್ತರು, ಸಿ.ಎ.ಆರ್. (ಕೇಂದ್ರ), ಬೆಂಗಳೂರು**<br>ಅ) ರೂ.66,000/- ಗಳ ದುರುಪಯೋಗಕ್ಕೆ ಸಂಬಂಧಿಸಿದಂತೆ ಆರೋಪಿತರ ವಿರುದ್ಧ ಇಲಾಖಾ ವಿಚಾರಣೆಯನ್ನು ಡಿಸಿಪಿ, ಪಶ್ಚಿಮ ವಿಭಾಗ ರವರು ನಡೆಸಿ ವರದಿಯನ್ನು ಪ್ರಧಾನ ಕಛೇರಿಗೆ ಸಲ್ಲಿಸಿದ್ದು, ಮುಂದುವರೆದು ಸರ್ಕಾರದಿಂದ 2ನೇ ಕಾರಣ ಕೇಳುವ ನೋಟೀಸು ಜಾರಿಯಾಗಿರುತ್ತದೆ.<br><br>ಆ) ರೂ. 59.80 ಲಕ್ಷಗಳ ದುರುಪಯೋಗಕ್ಕೆ ಸಂಬಂಧಿಸಿದಂತೆ ತಪ್ಪಿತಸ್ಥರ ವಿರುದ್ಧ ಸಿ.ಸಿ.ಬಿ ಯಲ್ಲಿ 76/2024 IPC 1860 u/s 120b, 408, 409 & 420 ಪ್ರಕರಣ ದಾಖಲಾಗಿರುತ್ತದೆ.<br><br>**2. ಕಮಾಂಡೆಂಟ್, 1 ನೇ ಕೆ.ಎಸ್.ಆರ್.ಪಿ., ಬೆಂಗಳೂರು.**<br>ಘಟಕದ ಮೆಸ್/ಕ್ಯಾಂಟೀನ್ ವ್ಯವಹಾರದಲ್ಲಿ ರೂ. 18,98,815/- ಗಳು ದುರಪಯೋಗವಾಗಿರುವ ವರದಿ ನೀಡಿದ್ದು, ಈ ಬಗ್ಗೆ ಜಂಟಿ ಇಲಾಖಾ ವಿಚಾರಣೆಗೆ ಸರ್ಕಾರದ ಆದೇಶ ಸಂಖ್ಯೆ: ಒಇ 87 ಪೊಸಿಪ 2021, ದಿನಾಂಕ 01.04.2024ರಲ್ಲಿ ಆದೇಶಿಸಲಾಗಿರುತ್ತದೆ. ಪ್ರಸ್ತುತ ಇಲಾಖಾ ವಿಚಾರಣೆ ಪ್ರಗತಿಯಲ್ಲಿರುತ್ತದೆ. |

ಸಂಖ್ಯೆ: ಒಇ 95 ಪಿಇಜಿ 2025

(ಡಾ: ಜಿ. ಪರಮೇಶ್ವರ)
ಗೃಹ ಸಚಿವರು